ಶ್ರೀ ಎಂ. ನಾಗಪ್ಪ.—ನಮ್ಮ ದೇಶ ಬಹಳ ಬಡ ದೇಶ. ಒಂದು ಟ್ಯಾಂಕ್ ಕಟ್ಟಬೇಕಾದರೆ, ಒಂದು ಬಾವಿ ತೋಡಿಸಬೇಕಾದರೆ ಹಣ ಇಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಗೊಬ್ಬರ ವನ್ನು ರೈತರಿಗೆ ಕೊಡಿಸುವುದಕ್ಕೆ ಹಣ ಇಲ್ಲವೆಂದು ಹೇಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಅಸ್ತಿಭಾರಶಿಲೆಯನ್ನು ಹಾಕಲು 10,700 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದನ್ನು ಸರ್ಕಾರದವರು ಎಷ್ಟರಮಟ್ಟಿಗೆ ಸಮಂಜಸ ಎಂದು ತಿಳಿದುಕೊಂಡಿದ್ದಾರೆ?

ಶ್ರೀ ಬಿ. ರಾಚಯ್ಯ.—ಅಸ್ತಿಭಾರಶಿಲೆ ಹಾಕಲು ಇಷ್ಟು ಹಣ ಖರ್ಚಾಗಿಲ್ಲ. ಆ ದಿವಸ ಬೇರೆ ಬೇರೆ ಕೆಲಸಗಳು ಸಹ ನಡೆದಿವೆ. ಆ ದಿವಸ ಎಲ್ಲಾ ಕೆಲಸಗಳಿಗೂ ಆದ ಖರ್ಚನ್ನು ಸೇರಿಸಿ ಇಲ್ಲಿ ಕೊಟ್ಟಿದ್ದೇವೆ.

ಶ್ರೀ ಎಂ. ನಾಗಪ್ಪ.—ಆ ದಿವಸ ತಾವು ಸಹ ಬಂದಿದ್ದಿರಿ. ಅಲ್ಲಿಯ ಏರ್ಪಾಡುಗಳನ್ನು ನೋಡಿದರೆ, ಒಂದು ಕಾಲಕ್ಕೆ ನಿಜಾಮರು ಬಂದರೆ ಏನು ಒಂದು ವೈಭವವನ್ನು ಕಾಣಬಹುದಾಗಿತ್ತೋ, ಆ ರೀತಿ ಇತ್ತು. ಮಂತ್ರಿಗಳು ಕುಳಿತುಕೊಳ್ಳುವುದಕ್ಕೆ ಪ್ರತ್ಯೇಕವಾದ ಕುರ್ಚಿಗಳು, ಮಂತ್ರಿಗಳು ಹೋಗುವ ಜಾಗದಲ್ಲಿ ಜಮಖಾನ ಹಾಸಿದ್ದರು. ಆ ಜಮಖಾನದ ಮೇರೆ ಬೇರೆಯವರು ಓಡಾಡುವಾಗಿಲ್ಲ. ಆ ಒಂದು ವ್ಯವಸ್ಥೆ ಇತ್ತು. ಅದು ನಿಜವೇ?

ಶ್ರೀ ಬಿ. ರಾಚಯ್ಯ.—ಈ ವ್ಯವಸ್ಥೆಗಳನ್ನು ರಾಯಚೂರಿನ ಪೌರಸಭೆಯವರು ಮತ್ತು ರಾಯಚೂರಿನ ಪ್ರಾಧರು ಸೇರಿ ಮಾಡಿದ್ದರು. ಮಾನ್ಯ ಸದಸ್ಯರು ನವಾಬರ ಏರಿಯಾದಿಂದ ಬಂದಿದ್ದಾರೆ. ಆ ರೀತಿ ಏರ್ಪಾಡು ಮಾಡುವುದು ಅಲ್ಲಿಯ ಪದ್ಧತಿ ಇರಬಹುದೆಂದು ನಾನು ತಿಳಿದಿದ್ದೇನೆ.

Sri D. B. KALMANKAR.—Will the Government place the detailed break-up of the expenditure of Rs. 10,700 before this House?

ಶ್ರೀ ಬಿ. ರಾಚಯ್ಯ.—ಆ ಬ್ರೇಕಪ್ ನನ್ನ ಹತ್ತಿರ ಇಲ್ಲ.

ಶ್ರೀ ಸದಾಶಿವಪ್ಪಪಾಟೀಲ್.—10,700 ರೂಪಾಯಿಗಳನ್ನು ಖರ್ಚು ಮಾಡಿರಬೇಕಾದರೆ ಕೇಂದ್ರದ ಮಂತ್ರಿಗಳನ್ನು ಒಲಿಸಿಕೊಳ್ಳುವುದಕ್ಕೆ ಮತ್ತು ಅವರಿಂದ ಹಣದ ಸಹಾಯ ಪಡೆದು ಕೊಳ್ಳುವುದಕ್ಕೆ ಎಂದು ನನಗನ್ನಿಸುತ್ತದೆ. ಅದು ಸರಿಯೇ?

ಶ್ರೀ ಬಿ. ರಾಚಯ್ಯ.—ಯಾವುದಾದರೂ ಇನಾಗ್ಯುರೇಷನ್ ಮಾಡುವಾಗ ರಸ್ತೆಗಳನ್ನು ಸರಿಮಾಡಬೇಕಾಗುತ್ತದೆ. ಪೆಂಡಾಲ್ ಕಟ್ಟಿಸಬೇಕಾಗುತ್ತದೆ. ಗೆಸ್ಟ್‌ಹೌಸ್ ಸರಿ ಇರಲಿಲ್ಲ. ಅಲ್ಲಿಯ ಎರಡು ರೂಮ್‌ಗಳನ್ನು ಸರಿ ಮಾಡಿಸಿ, ಆ ರೂಮ್‌ಗಳಿಗೆ ಹಾಸಿಗೆಯ ವ್ಯವಸ್ಥೆ ಮಾಡಿಸಬೇಕಾಗಿತ್ತು. ಈ ಖರ್ಚುಗಳೆಲ್ಲಾ ಸೇರಿ ಇಷ್ಟು ಹಣ ಖರ್ಚಾಗಿದೆ.

Protected Water Supply in Pandavapura Taluk

551. Sri N. A CHANNEGOWDA (Pandavapura).—

Will the Minister for Development be pleased to state:—

(*a*) the number of villages that are provided with protected water supply in Pandavapura Taluk;

(*b*) the number of village Panchayats from which representations for protected water supply have been received by Government;

(*c*) the number of village panchayats that have remitted their share of contribution;

(*d*) when did Chinkurli Village Panchayat remit its share of contribution;

(*e*) the impediments in the way of supplying protected water to Chinkurli Village Panchayat?

Sri B. L. GOWDA (Deputy Minister for Co-operation).—

(*a*) One.

(*b*) Five.

(*c*) Two Panchayats have remitted their share in full; One Panchayat has made part-payment.

(*d*) On 4th August 1966.

(*e*) Shortage of funds.

ಶ್ರೀ ಎನ್. ಎ. ಚನ್ನೇಗೌಡ.—ಎರಡು ಪಂಚಾಯಿತಿಗಳು ಹಣ ಪೂರ್ತಿ ಕೊಟ್ಟಿವೆ ಮತ್ತು ಇನ್ನೊಂದು ಭಾಗಶಃ ಕೊಟ್ಟಿದೆ ಎಂದು ಹೇಳಿದ್ದೀರಿ. ಯಾವ ಯಾವ ಪಂಚಾಯಿತಿಗಳು ಎನ್ನುವುದನ್ನು ಹೇಳುತ್ತೀರಾ?

ಶ್ರೀ ಬಿ. ಎಲ್. ಗೌಡ.—ಇಲಕೆರೆ ಮತ್ತು ಚಿನಕುರುಳಿ ಎರಡು ಪಂಚಾಯಿತಿಗಳು ಪೂರ್ತಿ ವಂತಿಗೆಯನ್ನು ಕೊಟ್ಟಿವೆ ಬನ್ನಂಗಾಡಿ ಎನ್ನುವುದು ಅರ್ಧ ಹಣ ಕೊಟ್ಟಿದೆ.

ಶ್ರೀ ಎನ್. ಎ. ಚನ್ನೇಗೌಡ.—ಬನ್ನಂಗಾಡಿಯವರು ಪೂರ್ತಿ ಕೊಟ್ಟಿದ್ದಾರೆ. 1966 ರಲ್ಲಿ ಚಿನಕುರುಳಿ ಪಂಚಾಯಿತಿಯವರೂ ಕೊಟ್ಟಿದ್ದಾರೆ. ಹೀಗೆ ಪೂರ್ತಿ ಹಣ ಕೊಟ್ಟಿರುವ ಕೆಲಸಗಳನ್ನು ಮಾಡದೆ, ಬೇರೆ ಕಡೆಗೆ ಏಕೆ ಮಂಜೂರು ಮಾಡಿದ್ದೀರಿ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿರುವುದು ಮೂರು ಪಂಚಾಯಿತಿಗಳು. ಇದರಲ್ಲಿ ಮೊದಲು ಬನ್ನಂಗಾಡಿ ಪಂಚಾಯಿತಿ ಭಾಗಶಃ ಕೊಟ್ಟಿದೆ ಎಂದು ಹೇಳಿದೆ. ಅದು ಸರಿಯಲ್ಲ. ಬನ್ನಂಗಾಡಿಯವರು ಪೂರ್ತಿ ಹಣ ಕಟ್ಟಿದ್ದಾರೆ. ಬನ್ನಂಗಾಡಿ ಹಾಗೂ ಚಿನಕುರುಳಿ ಇವೆರಡು ಪಂಚಾಯಿತಿಗಳವರೂ ಪೂರ್ತಿ ಹಣ ಕಟ್ಟಿದ್ದಾರೆ.

Complaints against the District Social Welfare Officer, Gulbarga

558. **Sri J. P. SARVESH** (Sedam).—

Will the Minister for Social Welfare be pleased to state:—

(*a*) the number of complaints received against the District Social Welfare Officer, Gulbarga since he joined his duty at Gulbarga;

(*b*) the number of persons complained and the dates of complaints;

(*c*) whether the investigation into all complaints have been made, if so by whom;